ಸಾಯಲ್ಲ ನೋಡು' ಅನ್ನುತ್ತಾ ಪೂಂಗೊಡಿ ಅದೊಂದು ದಿನ ಅಲ್ಲೇ ಬಿದ್ದಿದ್ದ ಚೂಪು ಕಲ್ಲೊಂದರಿಂದ ಕೆತ್ತಿದ್ದ ಆ ಅಕ್ಷರಗಳನ್ನು ಮನವಾಳನ್ ಹತ್ತಿರ ಹೋಗಿ ಮೆಲ್ಲಗೆ ತಡವಿದ. ತಾನು ಮತ್ತು ಪೂಂಗೊಡಿ ಪ್ರೀತಿಸುತ್ತಿದ್ದ ಆರಂಭದ ದಿನಗಳಲ್ಲಿ ಯಾರ ಕಣ್ಣಿಗೂ ಬೀಳದಂತೆ ಇದೇ ಸೇತುವೆಯ ಕಣ್ಣಿನಲ್ಲಿ ಕೂತು ಕಳೆಯುತ್ತಿದ್ದ ಕ್ಷಣಗಳು ಕಣ್ಣಿಗಿಳಿಯುತ್ತಲೇ ಮನವಾಳನ್ ಅಗಾಧ ಸಂಕಟಕ್ಕೊಳಗಾದ. ಅಂಥ ಸಂಕಟದ ಹೊಡೆತವನ್ನು ಆಳ್ತಕ್ಕೆ ತಂದುಕೊಳ್ಳಲೆಂಬಂತೆ ಆ ಹೆಸರುಗಳ ಮೇಲೆ ಬೆಳೆದಿದ್ದ ಹುಲ್ಲಿನ ಕಳೆಯನ್ನು ಕಿತ್ತು, ಅವುಗಳೊಳಗೆ ಕೂತಿದ್ದ ಪಾಚಿಯನ್ನು ಕೆರೆದು ಕೆಳಗುದುರಿಸಿ, ಆ ಅಕ್ಷರಗಳನ್ನು ಬಲಗೈಯ್ಯ ತೋರು ಬೆರಳಿನಿಂದ ಒಂದೆರಡು ಬಾರಿ ತಿದ್ದಿ, ಇನ್ನೇನು ಹೊರಡಬೇಕು ಅನ್ನುವಾಗ ಮೆಲ್ಲಗೆ 'ಪೂಂಗೊಡಿ, ಪೂಂಗೊಡಿ' ಅನ್ನುತ್ತಾ ಬಿಕ್ಕಿದ.

ಆ ರಸ್ತೆಯಲ್ಲಿ ಎರಡು ಮೈಲಿ ಸಾಗಿ, ಎಡಕ್ಕೆ ಬಾಗಿದರೆ ಮನವಾಳನ್‌ಗೆ ಒಂದು ಕಾಲಕ್ಕೆ ಸಕಲವೂ ಆಗಿದ್ದ ಕ್ವಾಟರ್ಸ್‌ಗಳು. ಅದೇ ರಸ್ತೆಯಲ್ಲಿ ಸೀದಾ ಮತ್ತೆರಡು ಮೈಲಿ ಮುಂದಕ್ಕೆ ಸಾಗಿ, ಬಲಕ್ಕೆ ಹೊರಳಿದರೆ ಒಂದು ಕಾಲಕ್ಕೆ ಇನ್ನಿಲ್ಲದ ಕನಸುಗಳನ್ನು ಮೊಗೆದುಕೊಟ್ಟಿದ್ದ ಮನವಾಳನ್‌ನ ಹೊಲ. ಹೊಲವನ್ನು ನೋಡುವ ಕಾರಣಕ್ಕೇ ಭಾರತಕ್ಕೆ ಬಂದಿದ್ದ ಮನವಾಳನ್, ಕಾರು ಕ್ವಾಟರ್ಸ್‌ಗಳನ್ನು ಸಮೀಪಿಸುತ್ತಿದ್ದಂತೆ ಇದ್ದಕ್ಕಿದ್ದಂತೆ ಮನಸು ಬದಲಿಸಿ, ಡ್ರೈವರ್ ಕೋಯಾಗೆ ಕಾರನ್ನು ಕ್ವಾಟರ್ಸ್‌ಗಳತ್ತ ತಿರುಗಿಸಲು ಹೇಳಿದ. ನಿವೃತ್ತಿಯಾಗಿ ಅಲ್ಲಿಂದ ಹೋದ ಮೇಲೆ ಮನವಾಳನ್ ಸುಮಾರು ಸಲ ಭಾರತಕ್ಕೆ ಬಂದಿದ್ದರೂ ಅಪ್ಪಿತಪ್ಪಿ ಕ್ವಾಟರ್ಸ್‌ಗಳತ್ತ ಮುಖ ಹಾಕಿರಲಿಲ್ಲ. ಕಾಲವಾದ ಹೆಂಡತಿ ಪೂಂಗೊಡಿಯಿಂದ ಹಿಡಿದು ಕಾಡಬಹುದಾಗಿದ್ದ ನೆನಪುಗಳು ಅವನನ್ನು ಅಲ್ಲಿಗೆ ಹೋಗದಂತೆ ಕಟ್ಟಾಕಿದ್ದವು. ಆದರವತ್ತು ಮನವಾಳನ್‌ಗೆ ಪೂಂಗೊಡಿ ನಡೆದಾಡಿದ್ದ ಜಾಗದಲ್ಲಿ ನಡೆದಾಡುವ, ಅವಳು ಉಸಿರಾಡಿದ್ದ ಗಾಳಿಯಲ್ಲೊಮ್ಮೆ ಉಸಿರಾಡುವ, ಅವಳಿಗೆ ಮುದವೀಯುತ್ತಿದ್ದುದೆಲ್ಲವನ್ನೂ ಕಣ್ತುಂಬಿಕೊಳ್ಳುವ ಆಸೆಯಾಯ್ತು. ಅದು ಅವನ ಸುಕ್ಕುಗಟ್ಟಿದ್ದ ಮುಖದ ನೆರಿಗೆಗಳಲ್ಲಿ ನೆನಪಿನ ಹಕ್ಕಿಗಳು ಕೂಗುವಂತೆ ಮಾಡಿತು.

ಕ್ವಾಟರ್ಸ್‌ಗಳಿಗಿದ್ದ ಜಲ್ಲಿ, ಮಣ್ಣಿನ ದಾರಿಯೂ ಅಲ್ಲಲ್ಲಿ ಕೊರಕಲು ಬಿದ್ದಿತ್ತು. ಕಾರು ಕ್ವಾಟರ್ಸ್‌ಗಳ ಅಂಗಳವನ್ನು ಹೊಗುತ್ತಲೇ ಮನವಾಳನ್ ಮೆಲ್ಲಗೆ ಕಂಪಿಸತೊಡಗಿದ. ಅಲ್ಲಿನ ಮನೆಗಳು ಅವನು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚು ಹಾಳು ಸುರಿಯುತ್ತಿದ್ದವು. ನಡುವಿನ ಬಯಲಲ್ಲಿದ್ದ ರಂಗಮಂದಿರದ ಕಬ್ಬಿಣದ ಸಲಾಕೆಗಳು ತುಕ್ಕು ಹಿಡಿದಿದ್ದವು. ಕೇವಲ ಮೂರ್ನಾಲ್ಕು ಮನೆಗಳಲ್ಲಿ ಮಾತ್ರ ವಾಸವಿದ್ದ ಗುರುತುಗಳಿದ್ದವು. ಮಿಕ್ಕೆಲ್ಲಾ ಮನೆಗಳ ಮೇಲೆ ಹಾಗೂ ಅವುಗಳ ಸುತ್ತಲೂ ಮರಗಿಡಗಳು ಅವುಗಳೆತ್ತರಕ್ಕೇ ಬೆಳೆದು ನಿಂತಿದ್ದವು. ಪಾಳು ಬಿದ್ದಿದ್ದ ಮನೆಗಳಿಂದ ಕಿಟಕಿ ಬಾಗಿಲುಗಳನ್ನು ಯಾರೋ ಕದ್ದಿದ್ದರು. ಮಿಕ್ಕವುಗಳನ್ನು ಗೆದ್ದಲು ತನ್ನದಾಗಿಸಿಕೊಂಡಿತ್ತು. ಒಂದು ಕಾಲದಲ್ಲಿ ಮಕ್ಕಳು ಮರಿಗಳಿಂದ ಗಿಜಿಗುಡುತ್ತಿದ್ದ ಅಂಗಳ ಬಿಕೋ ಅನ್ನುತ್ತಿತ್ತು. ಅಂಗಳದ ಮೂಲೆಯೊಂದರಲ್ಲಿದ್ದ ನಾಟಿ ಮಾವಿನ ಮರ ಮೈ ತುಂಬಾ ಕಾಯಿಡಿದಿತ್ತು. ಅದರಡಿಯಲ್ಲಿ ಬಿದ್ದಿದ್ದ ಕಾಯಿಗಳನ್ನು ಮೇಕೆಯೊಂದು ಮೂಸುತ್ತಿತ್ತು. ಇಡೀ ಕ್ವಾರಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಹಾಗೂ ವಾಲಿಬಾಲ್‌ನಲ್ಲಿ ಜೊತೆ ಆಟಗಾರನಾಗಿದ್ದ ಶಂಕರಪಿಳ್ಳೈ ತಂದು ನೆಟ್ಟಿದ್ದ, ತಾನು ಕ್ವಾರಿಯನ್ನು ಬಿಡುವ ಹೊತ್ತಿಗೆ ಅದೇ ತಾನೆ ಕಾಯಿಡಿಯತೊಡಗಿದ್ದ ಮಾವಿನ ಗಿಡ ದೊಡ್ಡ ಮರವಾಗಿಬಿಟ್ಟಿತ್ತು. ಇಡೀ ಕ್ವಾಟರ್ಸ್‌ನ ಮಂದಿ ಕಿತ್ತಾಡಿಕೊಂಡು ತಿನ್ನುತ್ತಿದ್ದ ಚಂದ್ರ ತೊಳೆಯ ಹಲಸಿನ ಮರ ಮಾತ್ರ ಕಾಣದಾಗಿತ್ತು. ಹತ್ತಿರ ಹೋಗಿ ದಿಟ್ಟಿಸಿದವನಿಗೆ ಅದರ ಮೋಟು ಬುಡವಷ್ಟೇ ಕಂಡಿತು. ಎರಡೂ ಕೈಗಳಿಂದ ಕಷ್ಟಪಟ್ಟು ತಬ್ಬಬಹುದಾಗಿದ್ದ ಅದರ ಬುಡವನ್ನು ಎಂದೋ ಬೆಂಕಿಯಿಂದ ಸೂಡಾಡಿದ್ದ ಗುರುತಿತ್ತು. ಆ ಬುಡದ ಆಚೆಯ ಬೇಲಿಯಲ್ಲಿ ಹಸಿರು ಕಕ್ಕುತ್ತಿದ್ದ ಎಳೆಯ ಗುಲ್‌ಮೊಹರ್ ಗಿಡವಿತ್ತು. ಅದರಾಚೆಗೆ ಅರೆ